ಶ್ರೀ ಎಂ.ರಘುಪತಿ.—ಜಿಲ್ಲಾವಾರು ಹೇಳುವುದಾದರೆ ಬೀದರ್ ೧೧ ಕಿರಿಯ ಕಾಲೇಜುಗಳು ಮತ್ತೆ ರಾಯಚೂರುಗೆ ಸುಮಾರು ಎರಡು ಕಿರಿಯಕಾಲೇಜುಗಳು. ಯಾರುಯಾರು ಅರ್ಜಿಗಳನ್ನು ಸಲ್ಲಿಸಿದ್ದರೋ ಅವರೆಲ್ಲರಿಗೂ ನಾವು ಮಂಜೂರು ಮಾಡಿದ್ದೇವೆ. ಮತ್ತೆ ಕೆಲವರಿಗೆ ನಾನಾ ಕಾರಣಗಳಿಂದ ಮಂಜೂರು ಮಾಡಲಿಲ್ಲ. ಅದೇ ರೀತಿಯಲ್ಲಿ ಪ್ರೌಢಶಾಲೆಗಳ ಬಗ್ಗೆ ಹೇಳುವುದಾದರೆ ಗುಲ್ಬರ್ಗಾ ಜಿಲ್ಲೆಗೆ ಪ್ರೌಢ ಶಾಲೆಗಳು ರಾಯಚೂರು ಜಿಲ್ಲೆಗೆ ನಾಲ್ಕು ಪ್ರೌಢಶಾಲೆಗಳನ್ನು ಮುಂಜೂರು ಮಾಡಿದ್ದೇವೆ.

ಶ್ರೀ ಬಸವರಾಜ ಪಾಟೀಲ್.—ಸ್ವಾಮಿ ನಾನು ಕೇಳಿದ್ದು ತುಮಕೂರು, ಬೆಂಗಳೂರು ಮೈಸೂರು ಜಿಲ್ಲೆಗಳಿಗೆ ಎಷ್ಟು ಶಾಲೆಗಳನ್ನು ಮಂಜೂರು ಮಾಡಿದ್ದೀರಿ ಎಂದು.

ಶ್ರೀ ಎಂ. ರಘುಪತಿ.—ಸ್ವಾಮಿ ನನ್ನ ಹತ್ತಿರ ಒಂದು ದೊಡ್ಡ ಜಿಲ್ಲಾವಾರು ಪಟ್ಟಿ ಇದೆ. ಅದನ್ನು ಬೇಕಾದರೆ ತಮಗೆ ಕಳುಹಿಸಿಕೊಡುತ್ತೇನೆ.

ಶ್ರೀ ಬಸವರಾಜ ಪಾಟೀಲ್.—ಸ್ವಾಮಿ ಆ ಪಟ್ಟಿ ನನ್ನ ಬಳಿ ಕೂಡ ಇದೆ.

ಶ್ರೀ ಎಂ. ರಘುಪತಿ.—ಮಾನ್ಯ ಅಧ್ಯಕ್ಷರೇ ನಾನು ವಿವರ ಓದಿದರೆ ಲೇಟ್ ಆಗುತ್ತದೆ.

ಅಧ್ಯಕ್ಷರು.—ತಾವು ಬೇಗ ಪ್ರಶ್ನೆ ಕೇಳಿ.

ಶ್ರೀ ಬಸವರಾಜ ಪಾಟೀಲ್.—ಸ್ವಾಮಿ ನಮ್ಮದ್ದು ಬಹಳ ಹಿಂದುಳಿದ ಭಾಗ. ಅಲ್ಲಿಗೆ ಯಾವುದೇ ರೀತಿಯ ಅನುಕೂಲಗಳನ್ನು ಕೂಡ ಮಾಡಿ ಕೊಟ್ಟಿಲ್ಲ.

ಶ್ರೀ ಎಂ. ರಘುಪತಿ:—ಸ್ವಾಮಿ ಖಾಸಗಿಯವರು ಎಲ್ಲೆಲ್ಲಿ ಮನವಿ ಮಾಡಿಕೊಂಡು ಶಾಲೆಗಳನ್ನು ತೆರೆಯುತ್ತೇವೆಂದು ಮುಂದೆ ಬಂದಿದ್ದರೋ ಅಲ್ಲಿ ನಾವು ಕೊಟ್ಟಿದ್ದೇವೆ. ಇದಕ್ಕೆ ಶಾಸಕರು ಕೂಡ ಶಿಫಾರಸ್ಸು ಮಾಡಿದ್ದಾರೆ. ಸ್ಥಳೀಯ ಜನರಿಂದ ಕೂಡ ಶಿಫಾರಸ್ಸು ಬಂದಿದೆ. ಆದರೆ ಮಾನ್ಯ ಸದಸ್ಯರ ಭಾಗದಿಂದ ಯಾವುದೇ ಖಾಸಗಿಯವರು ಮುಂದೆ ಬಂದಿಲ್ಲ. ಸರ್ಕಾರ ಮುಂದೆ ಶಾಲೆಗಳನ್ನು ತೆರೆಯಲು ಆಗ ಆದ್ಯತೆಯಮೇಲೆ ತೆರೆಯಲಾಗುವುದು.

ಶ್ರೀ ಬಸವರಾಜ್ ಪಾಟೀಲ್.—ಮಾನ್ಯ ಅಧ್ಯಕ್ಷರೇ, ಜ್ಞಿಕೊನೆಯದಾಗಿ ಒಂದು ಪ್ರಶ್ನೆ ಕೇಳುತ್ತೇನೆ. ಸರಕಾರದವರು ನಮ್ಮ ಬೀದರ್ ಜಿಲ್ಲೆಗೆ ೧೧ ಜೂನಿಯರ್ ಕಾಲೇಜುಗಳನ್ನು ಕೊಟ್ಟಿದ್ದೇವೆಂದು ಹೇಳಿದ್ದಾರೆ. ಆದರೆ ತಾಲ್ಲೂಕುವಾರು ವಿವರ ಹೇಳುತ್ತೀರಾ ? ಹುಮ್ನಾಬಾದ್, ಬೀದರ್, ಭಾಲ್ಕಿ, ಬಸವ ಕಲ್ಯಾಣ್ ಮತ್ತು ಔರಾದ್ ತಾಲ್ಲೂಕುಗಳಿಗೆ ಎಷ್ಟೆಷ್ಟು ಕೊಟ್ಟಿದ್ದಾರೆ ಎಂಬುದನ್ನು ತಿಳಿಸಬೇಕು ?

ಶ್ರೀ ಎಂ. ರಘುಪತಿ.—ಮಾನ್ಯ ಅಧ್ಯಕ್ಷರೇ, ತಾಲ್ಲೂಕುವಾರು ವಿವರಗಳ ಪಟ್ಟಿ ಇಲ್ಲ. ನಾನು ತಾಲ್ಲೂಕುವಾರು ಸಟ್ಟಿಯನ್ನು ಇಟ್ಟುಕೊಂಡಿಲ್ಲ. ಅದನ್ನು ಅವರಿಗೆ ನಂತರ ಕಳುಹಿಸಿಕೊಡುತ್ತೇನೆ. ಆದರಲ್ಲಿ ಅವರಿಗೆ ಏನಾದರೂ ನ್ಯೂನತೆ ಕಂಡುಬಂದರೆ ಸರಿಮಾಡುತ್ತೇನೆ ಎಂದು ಹೇಳುತ್ತೇನೆ.

ಶ್ರೀ ಬಸವರಾಜ್ ಪಾಟೀಲ್.—ನನ್ನ ಕ್ಷೇತ್ರಕ್ಕೆ ಎರಡು ಕೊಟ್ಟಿದ್ದಾರೆ.

ಅಧ್ಯಕ್ಷರು.—ಪಾಟೀಲರೇ ನೀವು ಅವರ ಕಡೆ ಬಂದು ಚರ್ಚೆ ಮಾಡಿರಿ.

ಶ್ರೀ ಎಂ. ರಘುಪತಿ.—ಅಧ್ಯಕ್ಷರೇ, ಒಂದೊಂದು ಕ್ಷೇತ್ರಕ್ಕೆ ಎರಡು ಕಿರಿಯಕಾಲೇಜು ಕೊಟ್ಟರೆ ಇಡೀ ರಾಜ್ಯಕ್ಕೆ ೪೦೦ರ ಮೇಲೆ ಕೊಡಬೇಕಾಗುತ್ತದೆ.

ಶಿವಮೊಗ್ಗದ ಸರ್ಕಾರಿ ಕಿರಿಯ ಕಾಲೇಜು ಕಟ್ಟಡ

ಶ್ರೀ ಕೆ. ಹೆಚ್. ಶ್ರೀನಿವಾಸ (ಶಿವಮೊಗ್ಗ).—ಮಾನ್ಯ ವಿದ್ಯಾಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಈಗ ಸರ್ಕಾರಿ ಕಿರಿಯ ಕಾಲೇಜಾಗಿ ಪರಿವರ್ತಿತವಾಗಿರುವ ಶಿವಮೊಗ್ಗ ಸರ್ಕಾರಿ ಪ್ರೌಢ ಶಾಲೆಯು, ಹಿಂದಿನ ಪ್ರೌಢಶಾಲಾ ಕಟ್ಟಡದಲ್ಲಿ, ಇದ್ದ ೧೩೦ ವರ್ಷಗಳಷ್ಟು ಹಳೆಯ ಕಟ್ಟಡದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಆ) ಹಾಗಿದ್ದಲ್ಲಿ ಈಗಿನ ವಿದ್ಯಾರ್ಥಿ ಸಂಖ್ಯೆಗೆ ಕಟ್ಟಡ ಸಾಕಾವುದಿಲ್ಲ ಮತ್ತು ಶೀಘ್ರ ದುರಸ್ತಿ ಅವಶ್ಯಕತೆ ಇದೆಯೇ

ಇ) ಪಿ.ಯು.ಸಿ. ತರಗತಿಯಲ್ಲಿಒಂದು ಐಚ್ಛಿಕ ವಿಷಯ ಅಂದರೆ ಕಲಾ ವಿಭಾಗ ಮಾತ್ರ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ? ಹಾಗಿದ್ದಲ್ಲಿ ಅಧಿಕ ವಿಭಾಗಗಳಾದ ವಿಳಾಸ ಮತ್ತು ವಾಣಿಜ್ಯ ವಿಷಯ ತೆರೆಯುವ ಬಗ್ಗೆ ಬೇಡಿಕೆ ಇದೆಯೇ ?

ಈ) ಹಾಗಿದ್ದಲ್ಲಿ, ಈ ವಿಷಯದಲ್ಲಿ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಎಂ. ರಘುಪತಿ (ಶಿಕ್ಷಣ ಮಂತ್ರಿಗಳು).—

ಅ) ಬಂದಿದೆ.

ಆ) ಹೌದು

೨. ಹೌದು ಇದೆ

ಇ) ೧. ಹೌದು

೨. ಹೌದು ಬೇಡಿಕೆ ಇದೆ

ಈ) ಲೋಕೋಪಯೋಗಿ ಇಲಾಖೆಯನ್ನು ಈ ಕಟ್ಟಡದ ರಿಪೇರಿಯನ್ನು ಅತಿ ಜರೂರಾಗಿ ತೆಗೆದುಕೊಳ್ಳಲು ಕೇಳಲಾಗುವುದು.

೨. ಅಧಿಕ ಉಪನ್ಯಾಸಕರ ಹುದ್ದೆಗಳಿಗೆ ಪ್ರಸ್ತಾವನೆ ಬಂದಿದ್ದು ಸರ್ಕಾರ ಪರಿಶೀಲಿಸುತ್ತಿದೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ, ಈ ಒಂದು ಕಟ್ಟಡದಲ್ಲಿ ೧೬೦೦ ಜನ ವಿದ್ಯಾರ್ಥಿಗಳಿಗಿಂತಲೂ ಹೆಚ್ಚು ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಈ ಕಟ್ಟಡಕ್ಕೆ ಸುಮಾರು ೧೩೦ ವರ್ಷ ವಯಸ್ಸಾಗಿದೆ. ಇನ್ನೂ ಇದರ ರಿಪೇರಿ ಮಾಡುವುದಕ್ಕೆ ಲೋಕೋಪಯೋಗಿ ಕೇಳಲಾಗುವುದು ಎಂದರೆ, ಇದನ್ನು ಯಾವ ಜನ್ಮಕ್ಕೆ ಕೇಳಲಾಗುವುದು, ಇದನ್ನು ಯಾವಾಗ ರಿಪೇರಿ ಮಾಡಲಾಗುವುದು? ಶಿವಮೊಗ್ಗ ನಗರದಲ್ಲಿರತಕ್ಕಂಥಾದ್ದು, ಇದೊಂದೇ ಒಂದು ಸರಕಾರಿ ಜೂನಿಯರ್ ಕಾಲೇಜು, ಮತ್ತು ಅಲ್ಲಿ ಬಡತನ ರೇಖೆಗಿಂತ ಕೆಳಗಿರತಕ್ಕಂಥ ಕುಟುಂಬಗಳಿಂದ ಮಕ್ಕಳು ಬರುತಾರೆ. ಎಲ್ಲ ಪಿ.ಯು.ಸಿ. ಓದತಕ್ಕಂಥ ಮಕ್ಕಳು ನೆಲದಮೇಲೆ ಕುಳಿತುಕೊಂಡು ಓದತಕ್ಕಂಥ ಪರಿಸ್ಥಿತಿ ಬಂದಿದೆ. ಆ ಕಟ್ಟಡ ರಿಪೇರಿ ಮಾಡಲಿಕ್ಕೆ ಇನ್ನೂ ಕೇಳಲಾಗುವುದು ಎಂದರೆ, ಇದು ಸಮಂಜಸವಾದ ಉತ್ತರ ಅಲ್ಲ ತಕ್ಷಣ ಇದನ್ನು ರಿಪೇರಿ ಮಾಡಬೇಕು, ಅಷ್ಟೇ ಅಲ್ಲದೆ ಏನಾದರೂ ತಾತ್ಕಾಲಿಕ ವ್ಯವಸ್ಥೆಯನ್ನಾದರೂ ಅದಕ್ಕೆ ಸ್ವಲ್ಪ ಅಡಿಷನಲ್ ಸ್ಪೇಸ್ ಮಾಡಬೇಕೆಂದು ಹೇಳಿದಾಗ, ಹಾಗೆ ಮಾಡುತ್ತೇನೆಂದು ಖಾಸಗಿಯಾಗಿ ತಾವು ನನಗೆ ಹೇಳಿದ್ದಿರಿ. ಆದರೆ ಉತ್ತರದಲ್ಲಿ ಆ ರೀತಿ ತಾವು ಹೇಳಲಿಲ್ಲ. ದಯವಿಟ್ಟು ಇದರ ಬಗ್ಗೆ ಏನು ಮಾಡುತ್ತೀರಿ ಎಂಬುದನ್ನು ಹೇಳಬೇಕು,

ಶ್ರೀ ಎಂ. ರಘುಪತಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಕೆ.ಹೆಚ್. ಶ್ರೀನಿವಾಸ್‌ರವರು ಈ ಬಗ್ಗೆ ನನಗೆ ಪತ್ರ ಬರೆದಿದ್ದರು. ಆ ಪತ್ರದ ಮೇಲೆ ನಾನು ಆಗಲೇ ಆಜ್ಞೆ ಕೊಟ್ಟಿದ್ದೇನೆ. ಅದೇನೆಂದರೆ ತಕ್ಷಣ ಅಲ್ಲಿ ಳ ಕೊಠಡಿಗಳನ್ನು ತಾತ್ಕಾಲಿಕವಾಗಿ ಕಟಿಸಬೇಕು, ಕಟ್ಟಿಸಿದಮೇಲೆ ಈ ಒಂದು ದುರಸ್ತಿ ಏನಿದೆ, ಆ ಕಾರ್ಯಕ್ರಮವನ್ನು ಕೈಗೆತ್ತಿಕೊಳ್ಳಬೇಕೆಂದು ಹೇಳಿದ್ದೇನೆ. ಇದು ೧೩೦ ವರ್ಷಗಳ ಹಳೆಯ ಕಟ್ಟಡ, ಅದನ್ನು ಉಳಿಸಿಕೊಂಡು ದುರಸ್ತಿ ಮಾಡಬೇಕಾಗುತ್ತದೆ. ಮಾನ್ಯಮೆಂಟಲ್ ವಾಲ್ಯೂ ಗೋಸ್ಕರ ಅದರ ರಕ್ಷಣೆ ಗೋಸ್ಕರ, ಪ್ರಾಚೀನ ವಾಸ್ತುಶಿಲ್ಪದಗೋಸ್ಕರ ಉಳಿಸಿಕೊಳ್ಳಬೇಕಾಗುತ್ತದೆ. ಆ ಕಟ್ಟಡವನ್ನು ಉಳಿಸಿಕೊಂಡು ರಿಪೇರಿ ಮಾಡುತ್ತೇನೆ.

ಶ್ರೀ ಬಿ.ಎಸ್. ಯೆಡಿಯೂರಪ್ಪ.— ಸ್ವಾಮಿ, ಅಧಿಕಾರಿಗಳಿಗೆ ತಾವು ದುಡ್ಡು ಕೊಡದೆ ಕಟ್ಟಡ ಕಟ್ಟಿ ಎಂದರೆ ಹೇಗೆ? ಈಗತಾನೆ ನಾನು ಮಾತನಾಡಿದೆ, ದುಡ್ಡಿಲ್ಲ ನಾವು ಹೇಗೆ ಕಟ್ಟುತ ಕಟ್ಟಿಸುವುದು ಎಂದು ಹೇಳಿದ್ದಾರೆ, ದುಡ್ಡು ಕೊಟ್ಟು ಅಧಿಕಾರಿಗಳಿಗೆ ಏನಾದರೂ ಹೇಳಿ ಸ್ವಾಮಿ.

ಶ್ರೀ ಎಂ. ರಘುಪತಿ.—ಅವರಿಗೆ ಉತ್ತ ಇಷ್ಟೇ. ದುಡ್ಡು ಹೆಚ್ಚಾಗಿ ಬೇಕಾಗಿದೆ ನಿಜ. ಇದು ೧೩೦ ವರ್ಷದ ಕಟ್ಟಡ, ಅದೇ ರೀತಿ ಬೆಂಗಳೂರು ನಗರದಲ್ಲಿರುವ ಸೆಂಟ್ರಲ್ ಹೈಸ್ಕೂಲು ಜೂನಿಯರ್

ಕಾಲೇಜೂ ಸಹ ೧೪೦ ವರ್ಷಗಳ ಹಳೆಯ ಕಟ್ಟಡ. ಇಂತಹ ೧೪೦–೧೫೦ ವರ್ಷಗಳ ಹಳೆಯ ಕಟ್ಟಡಗಳು ಏನಿವೆ, ಅವು ಯಾವಾಗ ಕುಸಿದು ಬಿದ್ದು ಹೋಗುತ್ತವೋ ಎಂಬ ಭಯ ಇದೆ. ಆ ಕಾರಣದಿಂದ ಇಂತಹ ಶಾಲೆಗಳಿಗೆ ಅದ್ಯತೆ ಮೇರೆಗೆ ದುರಸ್ತಿ ಕಾರ್ಯ ಮಾಡಲಾಗುತ್ತದೆ. ಈಗ ಶಿವಮೊಗ್ಗದ ಜೂನಿಯರ್ ಕಾಲೇಜು ಕಟ್ಟಡಕ್ಕೆ ೪ ಕೊಠಡಿಗಳನ್ನು ಕಟ್ಟಬೇಕೆಂದು ಹೇಳಿ ಆಜ್ಞೆ ಮಾಡಿರುತ್ತೇನೆ. ಹಣವನ್ನೂ ಸಹ ಒದಗಿಸುತ್ತೇನೆಂದು ಹೇಳುತ್ತಿದ್ದೇನೆ.

ಶ್ರೀ ಕೆ.ಹೆಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ, ಇದರ ಜೊತೆಗೆ ಆ ಶಾಲೆಗೆ ಅಗತ್ಯವಾಗಿ ಬೇಕಾದ ಪೀಠೋಪಕರಣಗಳೂ ಕೂಡಾ ಇಲ್ಲ. ಮತ್ತು ಇಲ್ಲಿ ಪಿ.ಯು.ಸಿ.ಯಲ್ಲಿ ಒಂದೇ ಒಂದು ಪಠ್ಯ ವಿಷಯ ಇದೆ. ಹೆಚ್.ಇ ಪಿ.ಎಸ್. ಎಂದರೆ ಆರ್ಟ್ಸ್ ಮಾತ್ರ ಇದೆ, ಇಲ್ಲಿ ವಿಜ್ಞಾನ ಮತ್ತು ಕಾಮರ್ಸ್ ವಿಭಾಗಗಳಿಗೆ ತುಂಬಾ ಬೇಡಿಕೆ ಇದೆ. ಈ ಬಗ್ಗೆ ಶೀಘ್ರವಾಗಿ ತೀರ್ಮಾನ ಕೈಗೊಳ್ಳಬೇಕು. ಮತ್ತು ಪೀಠೋಪಕರಣಗಳನ್ನು ತಕ್ಷಣ ತಾವು ಒದಗಿಸಬೇಕು. ಇದಕ್ಕೂ ಸಹ ಕಾರ್ಯಕ್ರಮ ಕೈಗೊಳ್ಳಬೇಕು.

ಶ್ರೀ ಎಂ. ರಘುಪತಿ.—ಪೀಠೋಪಕರಣಗಳನ್ನು ತಕ್ಷಣ ಒದಗಿಸುವುದಕ್ಕೆ ಏರ್ಪಾಡು ಮಾಡುತ್ತೇನೆ ಇನ್ನು ೧೫ ದಿನಗಳ ಒಳಗೇ ಆಜ್ಞೆಯನ್ನು ಹೊರಡಿಸಿ ಪೀಠೋಪಕರಣಗಳನ್ನು ಒದಗಿಸುತ್ತೇನೆ. ಎರಡನೆಯದಾಗಿ, ಸೈನ್ಸ್ ವಿಭಾಗ ತೆಗೆಯ ಬೇಕೆಂದು ಏನು ಹೇಳಿದ್ದಾರೆ, ಬರುವ ವರ್ಷಕ್ಕೆ ಅಲ್ಲಿ ಸೈನ್ಸ್ ವಿಭಾಗ ತೆಗೆಯುತ್ತೇವೆ. ಈಗಲೆಕೆ ಅಲ್ಲಿ ಸ್ಥಳಾಭಾವ ಇರುವುದರಿಂದ, ಸಾಕಷ್ಟು ಸ್ಥಳ ಆದಮೇಲೆ ಬರುವ ವರ್ಷದಿಂದ ತೆಗೆಯುತ್ತೇವೆ.

ಶ್ರೀ ವೇದಾಂತ ಹೆಮ್ಮಿಗೆ.—ಮಾನ್ಯ ಅಧ್ಯಕ್ಷರೇ,

ಅಧ್ಯಕ್ಷರು.—ನೀವು ದಯವಿಟ್ಟು ಕೂಳಿತುಕೊಳ್ಳಿ, ಕಾಲಾವಕಾಶ ಇಲ್ಲ.

ಶ್ರೀ ವೇದಾಂತ ಹೆಮ್ಮಿಗೆ.—ಒಂದು ಪ್ರಶ್ನೆ ಕೇಳುವುದಕ್ಕೂ ಅವಕಾಶ ಕೊಡದೇ ಹೋದರೆ ಏನು ಮಾಡೋಣ.

ಅಧ್ಯಕ್ಷರು.—ಬೇಗ ಕೇಳಿರಿ.

ಶ್ರೀ ವೇದಾಂತ ಹೆಮ್ಮಿಗೆ.—ಮಾನ್ಯ ಸಚಿವರು ಉತ್ತರ ಕೊಡುತ್ತಾ, ಕಟ್ಟಡ ಯಾವಾಗ ಕುಸಿಯುತ್ತೋ ಎನ್ನುವ ಭಯ ನಮಗಿದೆ ಎಂದು ಹೇಳಿದರು. ಈಗ ಯಾವ ಹುಡುಗರು ಅಲ್ಲಿ ಓದುತ್ತಿದ್ದಾರೆ, ದಯವಿಟ್ಟು ಅವರಿಗೆಲ್ಲಾ ಇನ್‌ಷ್ಯೂರೆನ್ಸ್ ಮಾಡಿಸುವುದಕ್ಕೆ ಕಾರ್ಯಕ್ರಮ ಕೈಗೊಳ್ಳುತ್ತೀರಾ?

ಶ್ರೀ ಎಂ. ರಘುಪತಿ.—ಹಳ್ಳಿಯ ಸಲಹೆ ಪರಿಶೀಲನೆ ಮಾಡಲಾಗುವುದು.

ಗುಲ್ಬರ್ಗ ಜಿಲ್ಲೆಯ ಪ್ರೌಢಶಾಲೆ ಹಾಗೂ ಪ್ರಾಥಮಿಕ ಶಾಲೆಯಲ್ಲಿರುವ ಜವಾನರ ಹುದ್ದೆಗಳನ್ನು ಭರ್ತಿಮಾಡುವುದು

೨೯೮. ಶ್ರೀ ಶಿವಶೇಖರಪ್ಪ ಗೌಡಾ ಶಿರವಾಳ (ಶಹಾಪುರ).—ವಿದ್ಯಾಮಂತ್ರಿಗಳು ದಯವಿಟ್ಟು ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸುವರೆ?

(ಅ) ಹೈದ್ರಾಬಾದ್ ಕರ್ನಾಟಕ ಪ್ರದೇಶದಲ್ಲಿರುವ (ಅದರಲ್ಲೂ ವಿಶೇಷವಾಗಿ ಗುಲ್ಬರ್ಗಾ ಜಿಲ್ಲೆಯಲ್ಲಿ) ಸರ್ಕಾರಿ ಹಿರಿಯ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಲ್ಲಿ ಜವಾನರು ನಿವೃತ್ತಿಯಾದ ಮೇಲೆ ಆ ಹುದ್ದೆಗಳಿಗೆ ಬೇರೆಯವರನ್ನು ಭರ್ತಿ ಮಾಡುತ್ತಿಲ್ಲದಿರುವುದು ನಿಜವಲ್ಲವೆ?

(ಆ) ಇದರಿಂದಾಗಿ ವಿದ್ಯಾರ್ಥಿಗಳು, ಶಿಕ್ಷಕರೂ ಕೊಂದರೆಗೊಳಗಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

(ಇ) ಹಾಗಿದ್ದಲ್ಲಿ ಈಗಲಾದರೂ ಸರ್ಕಾರದವರು ಖಾಲಿ ಇರುವ ಜವಾನರ ಹುದ್ದೆಗಳನ್ನು ಭರ್ತಿ ಮಾಡಲು ಶೀಘ್ರ ಕ್ರಮ ಕೈಗೊಳ್ಳುವರೆ ?